ಕಾಳಿಹುಂಡಿ ಶಿವಕುಮಾರ್, ಮೈಸೂರು
ಇಲ್ಲೊಬ್ಬಳು ನನ್ನನ್ನು ನೋಡಿದ ತಕ್ಷಣ 'ಮೆಲ್ಲುಸಿರೆ ಸವಿಗಾನ...' ಅಂತ ಹಾಡ್ತಾ ಇಲ್ಲ ಗುರು?



ಅದು 'ಏದುಸಿರೆನ್ನೆ ಕೊರೋನಾ' ಎಂದು ಹೇಳುವ ಇನ್ನೊಂದು ಪರಿ.

ಬಿ.ಆರ್. ಉಷಾ, ಬೆಂಗಳೂರು
ಸ್ವರ್ಗಕ್ಕೆ ಮೂರೇ ಗೇಣು. ನರಕಕ್ಕೆ ಎಷ್ಟು ಗೇಣು?
ಗೇಣಲ್ಲ, ಗೋಣು. ಒಳಿತಿಗೆ ಗೋಣು ಹಾಕಿದರೆ ಸ್ವರ್ಗ; ಕೇಡಿಗೆ ಗೋಣು ಹಾಕಿದರೆ ನರಕ.

ಅಂಚೆ ಸುಬ್ರಮಣ್ಯ, ಬೆಂಗಳೂರು
ಪ್ರಶ್ನೆಗೆ ನಿಮ್ಮಿಂದ ಉತ್ತರ ಬಂದಿಲ್ಲವೆಂದರೆ ಉತ್ತರಿಸಲಾಗದಂತಹ ಪ್ರಶ್ನೆ ಎಂದು ಭಾವಿಸಲೆ?
ಮೊದಲು ದಯವಿಟ್ಟು ಅಂತಹ ಪ್ರಶ್ನೆಯೊಂದನ್ನು ಕಳಿಸಿ.

ಎಂ.ಎ. ಕುಮಾರ್, ಬೆಂಗಳೂರು
ಹುಟ್ಟಿದ ಹಬ್ಬಕ್ಕೆ ಮೋಂಬತ್ತಿ, ಸತ್ತ ದಿನಕ್ಕೆ ಎಣ್ಣೆಯ ದೀಪ?



ಇದು ಚೈತನ್ಯದ ಬತ್ತಿ ಒಳಗಿರುವುದರ ಸೂಚಕ; ಅದು ಬತ್ತಿ ಕೊನೆಗೆ ಬಂದುದರ ದ್ಯೋತಕ.

ನಾರಾಯಣ ಯಾಜಿ, ಶಿರಾಲಿ
ಹಿರಿಹರೆಯದ ಸ್ವಪುತ್ರನ ಮದುವೆ ಮಾಡದೆ ಅನ್ಯರ ಪುತ್ರನಿಗೆ ಕೆಲಸವಿಲ್ಲವೆಂದು ಆಕ್ಷೇಪಿಸುವುದು ಅಧಿಕಪ್ರಸಂಗವೋ, ಮೂರ್ಖತನವೋ?
ಎರಡೂ ಅಲ್ಲ; ಹತಾಶೆಯಿಂದಾದ ಮನೋವಿಕಲ್ಪ.

ಕೆ. ಹೊನ್ನಪ್ಪ, ಕ್ಯಾತ್ಸಂದ್ರ
ಹಳ್ಳಿಯನ್ನು ಮರೆತವರು ಈಗ ಏಕೆ ದಿಲ್ಲಿಯನ್ನು ಖಾಲಿ ಮಾಡಿ ಹೋಗುತ್ತಿದ್ದಾರೆ?
'ಕರೋ' 'ಕರೋ' ಎನ್ನುತ್ತಿದ್ದ ದಿಲ್ಲಿ ಈಗ 'ಕರೋನಾ' ಎನ್ನುತ್ತಾ ನಿರುದ್ಯೋಗಿ ಆಗಿಸಿದ್ದರಿಂದ.

ಸಿ.ಆರ್. ಶ್ರೀನಿವಾಸ, ಬೆಂಗಳೂರು
ನಮ್ಮ ತಂದೆ, ನಮ್ಮ ತಾಯಿ ಎನ್ನುವ ನಾವು ನಮ್ಮ ಹೆಂಡತಿ/ಗಂಡ ಎಂದೇಕೆ ಹೇಳುವುದಿಲ್ಲ?
ನಮಗೆ ಕೌಸಲ್ಯಾಸುಮಿತ್ರಾಕೈಕೇಯಿಯರ ಅಥವಾ ಪಾಂಡವರ ಯೋಗ ಇಲ್ಲವಲ್ಲ!

ಶಿವಮೊಗ್ಗ ನರಹರಿ, ಬೆಂಗಳೂರು
ಜೀವನದ ಸಮಸ್ಯೆಗಳನ್ನು ಎದುರಿಸದೆ ಆತ್ಮಹತ್ಯೆ ಮಾಡಿಕೊಳ್ಳಲು ಯೋಚಿಸುವವರಿಗೆ ನಿಮ್ಮ ಸಲಹೆ?
ಧ್ರುವ ಬೇಸತ್ತು ಸತ್ತಿದ್ದರೆ ನಕ್ಷತ್ರ ಆಗುತ್ತಿರಲಿಲ್ಲ. ತಾಪವಿದ್ದಾಗ ತಪಕ್ಕೆ ತೊಡಗಿ.

ಮಹಾವೀರ ಕಾಸರ, ಶಿವಮೊಗ್ಗ
ಎರಡು ಪಕ್ಷಗಳು ಒಂದಾದಾಗ ಮೈತ್ರಿಪಕ್ಷ. ರಾಷ್ಟ್ರದ ಹಲವಾರು ಪಕ್ಷಗಳು ಸೇರಿದಾಗ?
ದೇಶಕ್ಕೆ ಪಿತೃಪಕ್ಷ.

ಖಾದ್ರಿ ಪ್ರಮೀಳ, ಮೇಲುಕೋಟೆ
'ಸತ್ಯಮೇವ ಜಯತೇ' ಸರಿಯೋ, 'ಸತ್ಯವಂತರಿಗಿದು ಕಾಲವಲ್ಲ' ಸರಿಯೋ?
'ಸತ್ಯವಂ ತರಿ; (ಅದಕ್ಕೆ) ಇದು ಕಾಲವಲ್ಲ' ಎಂಬುದೇ ಸರಿ.

ದೀಪಕ್ ಘಾಟೆ, ಬೆಂಗಳೂರು
'ಉತ್ತರಭೂಪ'ರಿಗೆ ನೀವು ಕೇಳಬೇಕೆಂದುಕೊಂಡಿದ್ದ ಪ್ರಶ್ನೆ ಯಾವುದು?
ಕೇಳದೆಯೇ ಉತ್ತರಿಸಿದ ಶ್ರೇಷ್ಠರವರು; 'ಅಂದನಾ ತಿಂಮ'ದಲ್ಲಿ ನನ್ನೆಲ್ಲ ಪ್ರಶ್ನೆಗಳಿಗೂ ಉತ್ತರವಿತ್ತು.

ಜೆ.ಆರ್. ಆದಿನಾರಾಯಣಮುನಿ
ಅನಂತದ ಕನ್ನಡಿ ಯಾವುದು?
ದಿಗಂತ.

ರಾಂಚಂದ್ರಕೊಪ್ಪಲು, ತೀರ್ಥಹಳ್ಳಿ
ಕೊರೊನಾ ವೈರಸ್ ಹೆಣ್ಣೋ, ಗಂಡೋ?
ವುಹಾನ್‌ನಲ್ಲಿ ಹುಟ್ಟಿ ಕುಂಗ್‌ಫೂ ಕಿಕ್ ಕೊಡುತ್ತಿರುವುದರಿಂದ ಚೀನೀ ಗಂಡೇ.

## ಬಹುಮಾನಿತ ಪ್ರಶ್ನೆ

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ
ರಸ್ತೆ ದಾಟಲು ಸೂತ್ರಗಳಿವೆ. ಸಂಸಾರದ ರಸ್ತೆ ದಾಟಲು?
ಹೆಜ್ಜೆಹೆಜ್ಜೆಗೆ ಅವಶ್ಯವಾದ ಪಾತ್ರಗಳಿವೆ.

ಆರ್. ಮಧುಸೂದನ್, ಹಾಸನ
ಈಗಿನ ಹೆಣ್ಣುಮಕ್ಕಳು ಗಂಡನನ್ನು 'ಹಬ್ಬಿ' ಎಂದು ಕರೆಯುವುದೇಕೆ?
ವರ್ಕ್ ಫ್ರಂ ಹೋಂ ಮಾಡುತ್ತಾ ಕೂತಲ್ಲೇ ಕೂತು ಅಷ್ಟೊಂದು ಹಬ್ಬಿರುವುದರಿಂದ.

ಗಣಪತಿ ಕಂಚಿಪಾಲ, ಯಲ್ಲಾಪುರ
ಡಾಕ್ಟರು ದೇವರು ಅಂತಾರೆ. ಅವರೇ ಭಯೋತ್ಪಾದಕರಾದರೆ?
ಗ್ರೀಕ್ ದೇವರು ಎಂದುಕೊಳ್ಳಿ! ಗ್ರೀಕ್ ಪುರಾಣದಲ್ಲಿ ಕ್ರೂರ ದೇವತೆಗಳ ಪಡೆಯೇ ಇದೆ.

ವಿ. ಹೇಮಂತಕುಮಾರ್, ಬೆಂಗಳೂರು
ಮೀನು ತಿನ್ನುವವರಿಗೆ ಬುದ್ಧಿ ಜಾಸ್ತಿಯಂತೆ ಹೌದೆ ರಾಮ್‌ಜೀ?



ಜಮೀನು ಕಬಳಿಸುವವರಿಗಂತೂ ಹೌದು.

ಪಿ.ಜೆ. ರಾಘವೇಂದ್ರ, ಮೈಸೂರು
ರೌಡಿಗಳ ಪಟ್ಟಿಯಲ್ಲಿ ರಾಜಕಾರಣಿಗಳ ಹೆಸರು ಇರುವುದಿಲ್ಲವೇಕೆ?
ಪಿಹೆಚ್‌ಡಿ ಮಾಡಿದವರ ಹೆಸರನ್ನು ಎಸ್‌ಎಸ್‌ಎಲ್‌ಸಿಯವರ ಪಟ್ಟಿಯಲ್ಲಿ ಸೇರಿಸುವುದು ಅಕ್ಷಮ್ಯ.

ಶೀಲಾ ಸತ್ಯೇಂದ್ರಸ್ವಾಮಿ, ಹರವೆ
ಎಂತಹ ಪ್ರಶ್ನೆಗೂ ಪುಟ್ಟ, ಅದ್ಭುತ ಉತ್ತರ ನೀಡುವ ನಿಮ್ಮನ್ನು ಸಾಹಿತ್ಯದ 'ಶಾರ್ಟ್ ಹ್ಯಾಂಡ್' ಎನ್ನಬಹುದೆ?
ಅನ್ನಬಹುದು. ಕನ್ನಡಿಗರು ಕನ್ನಡದ ಹಾಸ್ಯಸಾಹಿತಿಗಳಿಗೆ ಕೊಡುವುದೇ ಮೋಟು ಕೈ!

■ ರಾಮ್

ಪ್ರಶ್ನೆ ಕಳುಹಿಸಲು: **editorsu@sudha.co.in**